# ಕಂಗನಾ ಮತ್ತೆ ಗರಂ



ಕಂಗನಾ ರನೋತ್ ಪದೇ ಪದೇ ಗರಂ ಆಗುತ್ತಲೇ ಇದ್ದಾರೆ. ಈ ಸಲ ಅವರು ಟ್ವಿಟರ್‌ನಲ್ಲಿ ತಮ್ಮ ತಂಟೆಗೆ ಬಂದ ಮಹಿಳೆಯೊಬ್ಬರಿಗೆ ಖಡಕ್ಕಾಗಿ ಉತ್ತರ ಕೊಡುವ ಗೊಡವೆಗೆ ಬಿದ್ದಿದ್ದಾರೆ.

ಟಿ.ವಿ. ಪತ್ರಕರ್ತ ಅರ್ನಬ್ ಗೋಸ್ವಾಮಿ ವಾಟ್ಸ್‌ಆ್ಯಪ್ ಚಾಟ್‌ಗಳು ಇತ್ತೀಚೆಗೆ ವಿವಾದಕ್ಕೆ ಪಕ್ಕಾದದ್ದನ್ನು ಕಂಡಿದ್ದೇವೆ. ಆ ಚಾಟ್‌ನಲ್ಲಿ ಕಂಗನಾ ರನೋತ್ ಕುರಿತು ಹೃತಿಕ್ ರೋಷನ್ ಮಾಡಿದ್ದಾರೆನ್ನಲಾದ ಕಾಮೆಂಟ್ ಇತ್ತು. ಹೃತಿಕ್ ವಿಷಯದಲ್ಲಿ ಕಂಗನಾ 'ಸೆಕ್ಷುಯಲಿ ಪೊಸೆಸಿವ್' ಆಗಿದ್ದರು ಎಂಬ ಸಾಲು ಅದರಲ್ಲಿ ಇತ್ತೆಂದೂ, ಅದನ್ನು ಉಲ್ಲೇಖಿಸಿ ಮಹಿಳೆಯೊಬ್ಬರು ಟ್ವೀಟ್ ಮಾಡಿದ್ದರೆಂದೂ ಸುದ್ದಿಯಾಗಿತ್ತು. ಟ್ವೀಟಿಸಿದ ಮಹಿಳೆಯನ್ನು ನೇರವಾಗಿ ಟ್ವೀಟ್ ಮೂಲಕವೇ ಕಂಗನಾ ಮಾತಿಗೆಳೆದುಕೊಂಡರು.

'ಹೃತಿಕ್ ತಮ್ಮ ಅಭಿಪ್ರಾಯ ಹೇಳಿದ್ದರು. ಅವರನ್ನು ಅರ್ನಬ್ ಮಾತನಾಡಿಸಿದ್ದು 2017ರಲ್ಲಿ. ನನಗೆ ಅರ್ನಬ್ ಪರಿಚಿತರಾಗಿದ್ದು 2019ರಲ್ಲಿ. ನನ್ನ ಸಂದರ್ಶನ ಮಾಡಿದ ಮೇಲೆ ಅವರಿಗೆ ಹೃತಿಕ್ ಸಂದರ್ಶನ ಯಾಕಾದರೂ ಮಾಡಿದ್ದರೋ ಎಂದು ಹೇವರಿಕೆಯಾಗಿತ್ತು. ಅವೆಲ್ಲದರ ಅರಿವು ಟ್ವೀಟ್ ಮಾಡಿದವರಿಗಿಲ್ಲ' ಎಂದು ಅವರು ಒಂದು ಸಂದೇಶವನ್ನು ಪೋಸ್ಟ್ ಮಾಡಿದರು.

'ದೊಡ್ಡವರಿಗೆ ಸಣ್ಣತನದ ವಿಷಯಗಳು ಬೇಕಿರುವುದಿಲ್ಲ. ಸಣ್ಣವರಿಗೆ ಅಂಥವೇ ಆಹಾರ. ಬೇರೆಯವರ ಬದುಕಿನ ವಿಷಯಗಳನ್ನು ಹಣಕಿ ನೋಡುವ ದುರಭ್ಯಾಸ ಇರುತ್ತದೆ. ಅಂಥವರ ಮಾತಿಗೆ ಸೊಪ್ಪಾಗುವವಳು ನಾನಲ್ಲ' ಎಂದೆಲ್ಲ ಅವರು ಬರೆದುಕೊಂಡಿದ್ದಾರೆ.

ಹೃತಿಕ್ ರೋಷನ್ ತಮ್ಮ ಸಂದರ್ಶನದಲ್ಲಿ ಕಂಗನಾ ತಮಗಿಷ್ಟವಿಲ್ಲದಿದ್ದರೂ ಪುಂಖಾನುಪುಂಖವಾಗಿ ಇ–ಮೇಲ್‌ಗಳನ್ನು ಕಳುಹಿಸುತ್ತಿದ್ದರು ಎಂದು ಹೇಳಿದ್ದರು. 'ಕ್ರಿಷ್' ಹಿಂದಿ ಸಿನಿಮಾ ಚಿತ್ರೀಕರಣ ನಡೆದ ಸಂದರ್ಭದಲ್ಲಿ ಇಬ್ಬರ ನಡುವಿನ ರೊಮ್ಯಾನ್ಸ್ ಕುರಿತು ವದಂತಿ ಎದ್ದಿತ್ತು. ■



# ತೆಲುಗು ನಟನಾದ ಸಂಚಿತ್

ನೆಂದ ಶ್ರುತಿ ಹಾಸನ್, ಮಿಂದ ಸಂಚಿತ್ ಹೆಗಡೆ– ಇದು ಈ ಹೊತ್ತಿನ ಮಿಂಚು. ತಮ್ಮತನದ ಗಮಕಗಳಿಂದಲೇ ಸಿನಿಮಾ ಹಿನ್ನೆಲೆ ಗಾಯನದಲ್ಲಿ ಹೊಸತನದ ರುಜು ಹಾಕಿದ ಸಂಚಿತ್, ತೆಲುಗು ಸಿನಿಮಾವೊಂದರಲ್ಲಿ ಅಭಿನಯಿಸುವ ಮೂಲಕ ಹೊರಳಿದ್ದಾರೆ.

ಚಿತ್ರದ ಹೆಸರು 'ಪಿಟ್ಟ ಕಥಲು'. ನೆಟ್‌ಫ್ಲಿಕ್ಸ್ ವೇದಿಕೆಗೆಂದೇ ತಯಾರಾಗಿರುವ ನಾಲ್ಕು ವನಿತೆಯರ ಕಥಾನಕಗಳ ಗುಚ್ಛದ ಸಿನಿಮಾ ಇದು. ಒಂದು ಕಥನದಲ್ಲಿ ಸಂಚಿತ್ ಹಾಗೂ ಶ್ರುತಿ ಹಾಸನ್ ಜೋಡಿ. ಶ್ರುತಿಯ ಕೆನ್ನೆ ಮೇಲೆ ಕೈಯಾಡಿಸುವ, ತುಟಿಗೆ ತುಟಿ ಸೇರಿಸುವ ದೃಶ್ಯಗಳಲ್ಲಿ ಅವರು ಅಭಿನಯಿಸಿರುವುದು ಟ್ರೇಲರ್‌ಗಳಲ್ಲೇ ಕಾಣುತ್ತಿದೆ.

ನಾಗ್ ಅಶ್ವಿನ್, ನಂದಿನಿ ರೆಡ್ಡಿ, ಸಂಕಲ್ಪ್ ರೆಡ್ಡಿ, ತರುಣ್ ಭಾಸ್ಕಿ ಈ ಕಥಾಗುಚ್ಛದ ಸಿನಿಮಾ ನಿರ್ದೇಶಿಸಿದ್ದಾರೆ. ಸಂಚಿತ್ ಅಭಿನಯದ ಭಾಗಕ್ಕೆ ಆ್ಯಕ್ಷನ್–ಕಟ್ ಹೇಳಿರುವವರು ನಾಗ್ ಅಶ್ವಿನ್. ತೆಲುಗಿನಲ್ಲಿ 'ಮಹಾನಟಿ'ಯಂತಹ ಯಶಸ್ವಿ ಚಿತ್ರವನ್ನು ನಿರ್ದೇಶಿಸಿ ಗೆದ್ದವರು ಅವರು. ಅಂಥವರ ಗರಡಿಯಲ್ಲೇ ಮೊದಲ ಚಿತ್ರದಲ್ಲಿ ನಟಿಸುವ ಅವಕಾಶ ಕನ್ನಡದ ಹುಡುಗನಿಗೆ ಸಿಕ್ಕಿರುವುದು ಅದೃಷ್ಟವೇ ಸರಿ ಎಂದು ಕೆಲವರು ಕಮೆಂಟುಗಳನ್ನು ಮಾಡಿದ್ದಾರೆ.

ಜಗಪತಿಬಾಬು, ಶ್ರುತಿ ಹಾಸನ್, ಅಮಲಾ ಪಾಲ್, ಅಶ್ವಿನ್ ಕಾಕಮಾನು, ಈಶಾ ರೆಬ್ಬಾ, ಲಕ್ಷ್ಮೀ ಮಂಚು, ಸಾನ್ವಿ ಮೇಘನಾ ಅಭಿನಯಿಸಿರುವ 'ಪಿಟ್ಟ ಕಥಲು' ಕಥಾಹಂದರವು ಹಿಂದಿಯ 'ಲಸ್ಟ್ ಸ್ಟೋರೀಸ್'ನ ಎಳೆಯಿಂದ ಪ್ರೇರೇಪಿತವಾಗಿದೆ ಎನ್ನಲಾಗುತ್ತಿದೆ. ಪುರುಷ ಪ್ರಧಾನ ಧೋರಣೆಯನ್ನು ಮೀರುವ ನಾಲ್ಕು ಹೆಣ್ಣು ಪಾತ್ರಗಳೇ ಕಥೆಗಳ ಕೇಂದ್ರಬಿಂದುಗಳು.

ಇದುವರೆಗೆ ನೆಟ್‌ಫ್ಲಿಕ್ ತೆಲುಗು ಚಿತ್ರವೊಂದಕ್ಕೆ ನೇರವಾಗಿ ಬಂಡವಾಳ ತೊಡಗಿಸಿರಲಿಲ್ಲ. ಈಗ ಯೂತ್‌ಫುಲ್ ಆದ ವಸ್ತುವೊಂದರ ಮೂಲಕ ಅದಕ್ಕೆ ನಾಂದಿ ಹಾಡಿದೆ. ಫೆಬ್ರುವರಿ 19ರಂದು ನೆಟ್‌ಫ್ಲಿಕ್ಸ್‌ನಲ್ಲಿ 'ಪಿಟ್ಟ ಕಥಲು' ಬಿಡುಗಡೆಯಾಗಲಿದೆ. ಸಂಚಿತ್ ಗಾಯಕನಾಗಿಯೇ ಉಳಿಯುವರೋ ನಟನಾಗಿ ಜಿಗಿತ ಕಾಣುವರೋ ಎಂದು ನೋಡಬೇಕಿದೆ.

■ **ವಿಶಾಖ ಎನ್.**